**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ,** ದೇವದುರ್ಗ.

**ಸಿ.ಸಿ ನಂಬರ್‌: 1631/2021**

**ಪಿರ್ಯಾದಿ** : **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
**ದೇವದುರ್ಗ ತಾಲ್ಲೂಕು.**

**ವಿರುದ್ದ**

ಆರೋಪಿತರು : 2. ದಂಡಪ್ಪಗೌಡ ತಂದೆ ಚಂದಪ್ಪಗೌಡ , ವಯಸ್ಸು: ವಯಸ್ಕರು,

ವಾಸ: ಉಳ್ಳೆಸೂಗೂರು ಗ್ರಾಮ ತಾ: ಶಹಾಪುರ ಜಿ:ಯಾದಗಿರ

3. ಸೂಗಪ್ಪ ತಂದೆ ಅಮರಣ್ಣ , ವಯಸ್ಸು: ವಯಸ್ಕರು,

ವಾಸ: ಹಿರೇವಡಗೇರಾ ಗ್ರಾಮ ತಾ: ಶಹಾಪುರ ಜಿ:ಯಾದಗಿರ

4. ರಾಮನಗೌಡ ತಂದೆ ಬಸವಂತ್ರಾಯಗೌಡ , ವಯಸ್ಸು: ವಯಸ್ಕರು,

ವಾಸ: ವಂದಗನೂರ ಗ್ರಾಮ ತಾ: ಶಹಾಪುರ ಜಿ:ಯಾದಗಿರ

## ದೋಷಾರೋಪಣೆ

ಶ್ರೀ **ರಫೀಕ್ ಅಹ್ಮದ್** ಸಿವಿಲ್ **ಜಡ್ಜ್ ಮತ್ತು ಜೆಎಂಎಫ್‌ಸಿ, ದೇವದುರ್ಗ, ಆದ ನಾನು ಈ ಕೆಳಗಿನ ದೋಷಾರೋಪಣೆಯನ್ನು** ನಿಮ್ಮ **ಮೇಲೆ ಹೊರಿಸುವುದೇನೆಂದರೆ,**

ದಿನಾಂಕ **11-02-2016** ರಂದು ಮಧ್ಯಾಹ್ನ **3-00** ಗಂಟೆಗೆ ದೇವದುರ್ಗ ಪಟ್ಟಣದ ನೇತಾಜಿ ಓಣಿಯಲ್ಲಿ ವಾಸ ಮಾಡುವ ಸಾಕ್ಷಿ ನಂಬರ್ **1** ಮತ್ತು **4** ನೇದ್ದವರಿಗೆ ಸಾಕ್ಷಿ ನಂಬರ್ **5**ನೇದ್ದವಳು ಒಬ್ಬಳೆ ಮಗಳು ಇದ್ದು**,** ಅವರಿಗೆ ಗಂಡು ಮಕ್ಕಳು ಇಲ್ಲದೇ ಇದ್ದಿದ್ದರಿಂದ ಆರೋಪಿತರು ಸಾಕ್ಷಿ ನಂಬರ್ **1**ನೇದ್ದವನಿಗೆ ನಿನಗೆ ಗಂಡು ಮಕ್ಕಳು ಇರುವುದಿಲ್ಲ**,** ಒಬ್ಬಳೆ ಮಗಳು ಇರುತ್ತಾಳೆ ನಿನ್ನ ಆಸ್ತಿಯಲ್ಲಿ ಪಾಲು ಕೊಡಬೇಕೆಂದು ಕಿರಿಕಿರಿ ಮಾಡಿಕೊಂಡು ಬಂದಿದ್ದು**,** ಮೃತ **1**ನೇ ಆರೋಪಿ ನೇದ್ದವನ ಸಂಗಡ ಆರೋಪಿ ನಂಬರ್ **2** ರಿಂದ **4**ನೇದ್ದವರು ಗುಂಪು ಕಟ್ಟಿಕೊಂಡು ಸಾಕ್ಷಿ ನಂಬರ್ **1**ನೇದ್ದವರ ಮನೆಯಲ್ಲಿ ಜಗಳ ಮಾಡುವ ಉದ್ದೇಶದಿಂದ ಅಕ್ರಮವಾಗಿ ಪ್ರವೇಶ ಮಾಡಿದ್ದು**,** ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ 448 **ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

2. ಮೇಲ್ಕಂಡ ದಿನ ಸಮಯ ಹಾಗೂ ಸ್ದಳದಲ್ಲಿ ಆರೊಪಿ ನಂ.**2** ರಿಂದ **4** ನೇದ್ದವರಾದ ನೀವುಗಳು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು ಸಾಕ್ಷಿ ನಂಬರ್ 1 ನೇದ್ದವರೊಂದಿಗೆ ಜಗಳ ತೆಗೆದು ಸೂಳೆ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿದ್ದು, ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ 504 **ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

3. ಮೇಲ್ಕಂಡ ದಿನ ಸಮಯ ಹಾಗೂ ಸ್ದಳದಲ್ಲಿ ಆರೊಪಿ ನಂ.**2** ರಿಂದ **4** ನೇದ್ದವರಾದ ನೀವುಗಳು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು ಸಾಕ್ಷಿ ನಂಬರ್ 1 ಮತ್ತು 4 ನೇದ್ದವರೊಂದಿಗೆ ಜಗಳ ತೆಗೆದು ನಿಮಗೆ ಗಂಡು ಮಕ್ಕಳು ಇಲ್ಲ ನಿಮ್ಮ ಆಸ್ತಿಯಲ್ಲಿ ಪಾಲು ಕೊಡು ಇಲ್ಲವಾದಲ್ಲಿ ಮನೆಯಲ್ಲಿದ್ದ ಭತವನ್ನು ತೆಗೆದುಕೊಂಡು ಹೋಗುತ್ತೇವೆಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ 506 **ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

**ಮೇಲ್ಕಂಡ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.**

ಸಹಿ/-

ದಿನಾಂಕ **17.08.2026**

**(ಶ್ರೀ ರಫೀಕ್ ಅಹ್ಮದ್ )**

ಸ್ಥಳ **ದೇವದುರ್ಗ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವದುರ್ಗ.**